A

CCE RF/RR/ PF/PR

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD,
MALLESHWARAM, BENGALURU – 560 003

ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1

MARCH/APRIL 2026 EXAMINATION - 1

ಮಾದರಿ ಉತ್ತರಗಳು

MODEL ANSWERS

ಸಂಕೇತ ಸಂಖ್ಯೆ : **01-K** CODE NO. : **01-K**

ವಿಷಯ : ಪ್ರಥಮ ಭಾಷೆ — ಕನ್ನಡ

Subject : First Language — KANNADA

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)
(Regular Fresh / Regular Repeater / Private Fresh / Private Repeater)

ದಿನಾಂಕ : 18. 03. 2026] [ಗರಿಷ್ಠ ಅಂಕಗಳು : 100

Date : 18. 03. 2026] **[Max. Marks : 100**

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I.	**ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**6 × 1 = 6**
1.	ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ (ಎ) ೬ (ಬಿ) ೭ (ಸಿ) ೮ (ಡಿ) ೯ *ಉತ್ತರ :* (ಡಿ) ೯	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	'ವಧೂಪೇತ' ಪದವು ಈ ಸಂಧಿಗೆ ಸೇರಿದೆ (ಎ) ಲೋಪ ಸಂಧಿ (ಬಿ) ಸವರ್ಣದೀರ್ಘ ಸಂಧಿ (ಸಿ) ವೃದ್ಧಿ ಸಂಧಿ (ಡಿ) ಗುಣ ಸಂಧಿ ***ಉತ್ತರ :*** (ಬಿ) ಸವರ್ಣದೀರ್ಘ ಸಂಧಿ	
3.	ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ (ಎ) ಪ್ರಶ್ನಾರ್ಥಕ (ಬಿ) ಭಾವಸೂಚಕ (ಸಿ) ವಾಕ್ಯವೇಷ್ಟನ (ಡಿ) ಆವರಣ ***ಉತ್ತರ :*** (ಸಿ) ವಾಕ್ಯವೇಷ್ಟನ	
4.	ವರ್ತಮಾನ ಕಾಲಸೂಚಕ ಪ್ರತ್ಯಯವಿದು (ಎ) ದ (ಬಿ) ಉವ (ಸಿ) ವ (ಡಿ) ಉತ್ತ ***ಉತ್ತರ :*** (ಡಿ) ಉತ್ತ	
5.	ದ್ವಿತೀಯಾ ವಿಭಕ್ತಿಯ ಕಾರಕಾರ್ಥವಿದು (ಎ) ಕರ್ಮಾರ್ಥ (ಬಿ) ಕರ್ತ್ರಾರ್ಥ (ಸಿ) ಸಂಪ್ರದಾನ (ಡಿ) ಅಧಿಕರಣ ***ಉತ್ತರ :*** (ಎ) ಕರ್ಮಾರ್ಥ	
6.	'ಮಾದ್ರಮಾಗಧಯಾದವರು' ಪದವು ಈ ಸಮಾಸಕ್ಕೆ ಸೇರಿದೆ (ಎ) ತತ್ಪುರುಷ (ಬಿ) ದ್ವಂದ್ವ (ಸಿ) ಕ್ರಿಯಾ (ಡಿ) ಬಹುವ್ರೀಹಿ ***ಉತ್ತರ :*** (ಬಿ) ದ್ವಂದ್ವ	
II.	**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**4 × 1 = 4**
7.	ಅಮೃತ : ಅಮರ್ದು :: ಕಾರ್ಯ : ..... ***ಉತ್ತರ :*** ಕಜ್ಜ	
8.	ಅಷ್ಟು : ಪರಿಮಾಣವಾಚಕ :: ಹನ್ನೆರಡು : ..... ***ಉತ್ತರ :*** ಸಂಖ್ಯಾವಾಚಕ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
9.	ಹಾಲ್ಜೇನು : ಜೋಡುನುಡಿ :: ತುತ್ತತುದಿ : ..... ***ಉತ್ತರ :*** ದ್ವಿರುಕ್ತಿ	
10.	ನಿನಗಾಗಿ : ತದ್ಧಿತಾಂತಾವ್ಯಯ :: ಪೆರ್ಮೆ : ..... ***ಉತ್ತರ :*** ತದ್ಧಿತಾಂತ ಭಾವನಾಮ	
III.	**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು** **(ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :**	**7 × 1 = 7**
11.	ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ? ***ಉತ್ತರ :*** ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಬಂದವು.	
12.	ಹುಲಿಗೆ ಪರಮಾನಂದವಾಗಲು ಕಾರಣವೇನು ? ***ಉತ್ತರ :*** ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.	
13.	ಲಂಡನ್ ನಗರದಲ್ಲಿ ಪ್ರಸಿದ್ಧಿ ಪಡೆದ ಸಿಂಪಿಗಳ ಹೆಸರೇನು ? ***ಉತ್ತರ :*** ಲಂಡನ್ ನಗರದಲ್ಲಿ 'ಸ್ಯಾವ್ಯೋಯ್' ಸಿಂಪಿಗಳು ಪ್ರಸಿದ್ಧಿ ಪಡೆದಿದ್ದಾರೆ.	
14.	ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು ? ***ಉತ್ತರ :*** ಅಗ್ನಿಭೂತಿ ಮತ್ತು ವಾಯುಭೂತಿಯರು ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆ ಗರ್ವಿಷ್ಠರಾಗಿ ಕೆಟ್ಟು ಹೋಗುವರೆಂದು ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿದನು.	
15.	ಹಲಗಲಿ ಗ್ರಾಮ ಎಲ್ಲಿದೆ ? ***ಉತ್ತರ :*** ಹಲಗಲಿ ಗ್ರಾಮವು ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
16.	ಪರಶುರಾಮನು ದ್ರೋಣನಿಗೆ ಯಾವುದರಲ್ಲಿ ಅರ್ಘ್ಯವನ್ನು ನೀಡಿದನು ? ***ಉತ್ತರ :*** ಪರಶುರಾಮನು ದ್ರೋಣನಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದನು.	
17.	ಪುಟ್ಟ ಪೋರಿಯ ಅಮ್ಮನ ತೂತುಬಿದ್ದ ಸೀರೆಯಲ್ಲಿ ಯಾರು ಸೊರಗಿದ್ದಾರೆ ? ***ಉತ್ತರ :*** ಪುಟ್ಟ ಪೋರಿಯ ಅಮ್ಮನ ತೂತುಬಿದ್ದ ಸೀರೆಯಲ್ಲಿ ಬಾಲರವಿ ಸೊರಗಿದ್ದಾನೆ.	
IV.	**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**	**10 × 2 = 20**
18.	ಲಿಪಿಯ ಜಾಡು ಹೇಗೆ ಆರಂಭಗೊಂಡಿತು ? ***ಉತ್ತರ :*** ಮಾನವ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಮೊದಲು ಮಾಡಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಯಾವ ಓದು ಬರೆಹವಿಲ್ಲದ ಹಳ್ಳಿಯ ಕೆಲಸಗಾರನು ಸಹ ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೆಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಕೊನೆಯಲ್ಲಿ ಲೆಕ್ಕ ಹಾಕಿ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರು ಹೀಗೆಯೇ ಲೆಕ್ಕವಿಡುವುದುಂಟು. ಪುರಾತನ ಸುಮೇರ್, ನೈಲ್, ಕ್ರಿಟಗಿರಿ ಇತ್ಯಾದಿ ಪ್ರದೇಶಗಳಲ್ಲಿ ಈ ಬಗೆಯ ಲಿಪಿ ಸಾಕ್ಷ್ಯಗಳು ದೊರೆತಿವೆ. ಹೀಗೆ ಲಿಪಿಯ ಜಾಡು ಆರಂಭಗೊಂಡಿತು.	
19.	ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ. ***ಉತ್ತರ :*** ಏನನ್ನಾದರೂ ಸಾಧಿಸಬೇಕೆಂಬ ದೃಢನಿರ್ಧಾರ, ಅದಕ್ಕೆ ತಕ್ಕಂತೆ ಕ್ರಮನಿಷ್ಠತೆ, ಪ್ರತಿಭೆ ಮತ್ತು ಮನೋಸ್ಥೈರ್ಯವನ್ನು ಹೊಂದಿದ್ದ ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಬೆಂಗಳೂರಿನ ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣ, ಸೆಂಟ್ರಲ್	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಕಾಲೇಜಿನಲ್ಲಿ ಎರಡು ವರ್ಷಗಳ ಇಂಟರ್ ಮೀಡಿಯಟ್ ಮತ್ತು ಮೂರು ವರ್ಷಗಳ ಬಿ.ಎ. ಪದವಿ ಶಿಕ್ಷಣ ಪಡೆದರು. ಮೈಸೂರಿನ ದಿವಾನರಾದ ಸಿ. ರಂಗಾಚಾರ್ಲು ಅವರಿಂದ ವಿದ್ಯಾರ್ಥಿ ವೇತನ ಸೌಲಭ್ಯ ಪಡೆದು ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಕ್ಕೆ ಪಾತ್ರರಾದರು.	
20.	ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳನ್ನು ಹೆಸರಿಸಿ. ***ಉತ್ತರ :*** ಲಂಡನ್ ನಗರದ ವೂಲವರ್ಥ ಎಂಬ ಸ್ಟೇಷನರಿ ಅಂಗಡಿ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ. ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಎಲ್ಲ ತರದ ಸಾಮಾನುಗಳನ್ನು ಮಾರುತ್ತಾರೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಹೀಗೆ ಎಲ್ಲಾ ತರದ ಸಾಮಾನುಗಳು ಇಲ್ಲಿ ದೊರೆಯುತ್ತವೆ.	
21.	ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು ? ***ಉತ್ತರ :*** ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ಹಗಲಿರುಳೆನ್ನದೆ ಓದಿಸಿದನು. ಏಳೆಂಟು ವರ್ಷದೊಳಗೆ ನಾಲ್ಕು ವೇದಗಳು, ಆರು ಅಂಗಗಳು, ಹದಿನೆಂಟು ಧರ್ಮಶಾಸ್ತ್ರಗಳು, ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ, ಶಾಲಿಹೋತ್ರ, ಪಾಳಕಾಪ್ಯ, ಚರಕ, ಅಶ್ವಿನೀಮತ, ಅಷ್ಟಾಂಗ ಹೃದಯ, ಶುಶ್ರುತನ ವೈದ್ಯಶಾಸ್ತ್ರ, ಜೋತಿಷ್ಯ, ಮಂತ್ರವಾದ ಮೊದಲಾದ ಶಾಸ್ತ್ರಗಳನ್ನು ಕಲಿತರು.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
22.	ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ? ***ಉತ್ತರ :*** ಕಾಲವೆಂಬ ಪಕ್ಷಿ ಯುಗಯುಗಗಳ ಹಣೆಬರೆಹವನ್ನು ಅಳಿಸಿಹಾಕಿ, ಹೊಸತನದ ಹೊಸ ಹಣೆಬರೆಹವನ್ನು ಬರೆದು ಬದಲಾವಣೆಯ ಭಾಗ್ಯವನ್ನು ತೆರೆದುಕೊಟ್ಟಿದೆ, ಹೀಗೆ ರೆಕ್ಕೆ ಬೀಸುತ್ತ ಹಾರುತಲಿರುವ ಕಾಲವೆಂಬ ಹಕ್ಕಿ ಸರ್ವಾಧಿಕಾರಗಳ ದರ್ಪವನ್ನು ಅಡಗಿಸುತ್ತಾ, ಹೊಸಕಾಲದ ಹಸುಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಹೊಸ ಚೇತನದ ಆಶೀರ್ವಾದವನ್ನು ಮಾಡುತ್ತ ಶುಭ ಹಾರೈಸುತ್ತಿದೆ ಎಂದು ಕವಿ ಹೇಳಿದ್ದಾರೆ.	
23.	ಹಲಗಲಿಗೆ ದಂಡು ಬರಲು ಕಾರಣವೇನು ? ***ಉತ್ತರ :*** ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದಿತು. ಇದರ ಅನ್ವಯ ಬ್ರಿಟಿಷರ ಒಪ್ಪಿಗೆಯಿಲ್ಲದೆ ಯಾರೊಬ್ಬರೂ ಶಸ್ತ್ರಾಸ್ತ್ರಗಳನ್ನು ಹೊಂದುವಂತಿರಲಿಲ್ಲ. ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿದರು. ಈ ಆದೇಶದೊಂದಿಗೆ ಶಸ್ತ್ರಾಸ್ತ್ರಗಳನ್ನು ಪಡೆಯಲು ಬಂದಿದ್ದ ಕಾರಕೂನನ ಕಪಾಳಕ್ಕೆ ಹೊಡೆದು, ಸಿಪಾಯಿಯನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರನ್ನು ಬಗ್ಗುಬಡಿಯಲು ದಂಡನ್ನು ಕರೆಸಿದ್ದರಿಂದ ಹಲಗಲಿಗೆ ದಂಡು ಬಂದಿತು.	
24.	ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸ್ಥಳದಲ್ಲಿನ ಮಣ್ಣನ್ನು ಸಂಗ್ರಹಿಸಿದ ಬಗೆಯನ್ನು ಬರೆಯಿರಿ. ***ಉತ್ತರ :***	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಬಾಲ್ಯದಿಂದಲೇ ದೇಶಭಕ್ತಿಯನ್ನು ಮೈಗೂಡಿಸಿಕೊಂಡಿದ್ದ ವೀರ ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದ ಸ್ಥಳಕ್ಕೆ ಹೋಗಿ ಭಕ್ತಿಯಿಂದ ತಲೆಬಾಗಿ ರಕ್ತದಿಂದ ತೊಯ್ದ ಒಂದು ಚಿಟಿಕೆ ಮಣ್ಣನ್ನು ತನ್ನ ಹಣೆಯ ಮೇಲೆ ತಿಲಕವನ್ನಿಟ್ಟುಕೊಂಡನು. ಕಣ್ಮುಚ್ಚಿ ಭಕ್ತಿಯಿಂದ ಕೈಮುಗಿದು, ಹುತಾತ್ಮರಿಗೆ ಗೌರವ ಸಲ್ಲಿಸಿ, ಪೂಜ್ಯನೀಯವಾದ ಆ ಮಣ್ಣನ್ನು ತನ್ನ ಊಟದ ಡಬ್ಬಿಯಲ್ಲಿ ಮನೆಗೆ ತಂದನು. ಅದು ತನಗೆ ದೊರೆತ ಪಾರಿತೋಷಕವೆಂಬಂತೆ ತಿಳಿದು ಮಣ್ಣಿನ ಡಬ್ಬಿಯನ್ನು ಮನೆಯ ಸ್ವಚ್ಛ ಜಾಗದಲ್ಲಿಟ್ಟು ಹೂಗಳನ್ನು ಇರಿಸಿ, ನಮಸ್ಕರಿಸಿ ಪೂಜಿಸತೊಡಗಿದನು.	
25.	ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವನ್ನು ತಿಳಿಸಿ.	
	ಉತ್ತರ :	
	ಸರ್ಕಾರದ ಸ್ಥಾಪನೆ, ವಿಸರ್ಜನೆ ಹಾಗೂ ಶಾಸನಗಳನ್ನು ರಚಿಸುವುದಕ್ಕೆ ರಾಜಕೀಯ ಸ್ವಾತಂತ್ರ್ಯವಿದೆ. ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಯನ್ನು ಒದಗಿಸಿಕೊಡುವುದು ಸರ್ಕಾರದ ಕೆಲಸ. ಸರ್ಕಾರವು ಯಾರನ್ನು ರಕ್ಷಿಸುವುದು ತನ್ನ ಕರ್ತವ್ಯವಾಗಿರುತ್ತದೆಯೋ, ಅವರಿಂದಲೇ ತನ್ನ ಅಧಿಕಾರ ಬಲವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎಂಬುದು ಮಾನವನ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವವೇ ಆಗಿದೆ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದಲೇ ಬರುತ್ತದೆ.	
26.	ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಭಿಪ್ರಾಯವನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾಳೆ ?	
	ಉತ್ತರ :	
	ಚೆನ್ನಮಲ್ಲಿಕಾರ್ಜುನನ ಭಕ್ತೆಯಾದ ಅಕ್ಕಮಹಾದೇವಿ ಜ್ಞಾನಿ-ಅಜ್ಞಾನಿಗಳ ಕುರಿತು ಮಾರ್ಮಿಕವಾಗಿ ತನ್ನ ವಚನದಲ್ಲಿ ತಿಳಿಸಿದ್ದಾಳೆ. ಜಗತ್ತಿನಲ್ಲಿ ಜ್ಞಾನಿಗಳು ಹಾಗು ಅಜ್ಞಾನಿಗಳು ಇದ್ದಾರೆ. ಅಜ್ಞಾನಿಗಳು ಅಂದರೆ ಅರಿಯದವರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಬೆಂಕಿಯನ್ನು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಪಡೆದಂತೆ ಅಂದರೆ ಅಪಾಯವನ್ನು ನಮ್ಮ ಮೇಲೆ ಎಳೆದುಕೊಂಡಂತೆ. ಜ್ಞಾನಿಗಳು ಅಂದರೆ ಅರಿತವರೊಡನೆ ಸ್ನೇಹ ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ. ಕರ್ಪೂರದ ಗಿರಿಯು ಉರಿದಾಗ ಏನೂ ಉಳಿಯುವುದಿಲ್ಲ. ಹಾಗೆಯೇ ಶರಣರ ಸಂಗದಿಂದ ಎಲ್ಲಾ ಪಾಪಗಳು ಪರಿಹಾರವಾಗುವುದು. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂಬಂತೆ ಯಾರ ಸ್ನೇಹವನ್ನು ನಾವು ಮಾಡಬೇಕೆಂಬ ಅರಿವನ್ನು ಅಕ್ಕಮಹಾದೇವಿ ತಿಳಿಸಿಕೊಡುತ್ತಾಳೆ.	
27.	ರಾಜರ ಪ್ರಕೃತಿ ಹೇಗಿರುತ್ತದೆ ? ***ಉತ್ತರ :*** ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು, ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದಕ್ಕೆಲ್ಲ ಕಾರಣ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ. ರಾಜ್ಯಾಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ. ಹೀಗೆ ರಾಜರ ಪ್ರಕೃತಿ ಇರುತ್ತದೆ.	
V.	**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**	**2 × 3 = 6**
	ಜನ್ಮಸ್ಥಳ, ಕಾಲ	1 ಅಂಕ
	ಕೃತಿ, ಬಿರುದು / ಪ್ರಶಸ್ತಿ	1 ಅಂಕ
	ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ	1 ಅಂಕ
	ಒಟ್ಟು	3 ಅಂಕಗಳು
28.	ಎ.ಎನ್. ಮೂರ್ತಿರಾವ್ : ***ಉತ್ತರ :*** ಆಧುನಿಕ ಕನ್ನಡದ ಪ್ರಮುಖ ಗದ್ಯಬರೆಹಗಾರರಲ್ಲಿ ಒಬ್ಬರಾದ ಶ್ರೀಯುತ ಎ.ಎನ್. ಮೂರ್ತಿರಾವ್‌ರವರು ಸಾ.ಶ. ೧೯೦೦ ರಲ್ಲಿ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಶ್ರೀಯುತರು 'ಸಮಗ್ರ ಲಲಿತ ಪ್ರಬಂಧಗಳು, ಹಗಲುಗನಸುಗಳು, ಅಲೆಯವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು-ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ, ಚಿತ್ರಗಳು-ಪತ್ರಗಳು, ದೇವರು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ' ಲಭಿಸಿವೆ.	
29.	*ರನ್ನ :* ***ಉತ್ತರ :*** ಕನ್ನಡ ಸಾರಸ್ವತ ಲೋಕದ ಕವಿ ರತ್ನತ್ರಯರಲ್ಲಿ ಒಬ್ಬನಾದ ರನ್ನನು ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಸಾ.ಶ. ಸುಮಾರು ೯೪೯ ರಲ್ಲಿ (ಹತ್ತನೆಯ ಶತಮಾನ) ಜನಿಸಿದನು. ಈತನು ಚಾಲುಕ್ಯರ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು 'ಸಾಹಸ ಭೀಮ ವಿಜಯಂ (ಗದಾಯುದ್ಧ), ಅಜಿತ ತೀರ್ಥಂಕರ ಪುರಾಣತಿಲಕಂ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ, ರನ್ನಕಂದ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾನೆ.	
VI.	**ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** ಪ್ರಸ್ತಾರ ಹಾಕುವುದು ಗಣ ವಿಭಾಗಿಸುವುದು ಛಂದಸ್ಸಿನ ಹೆಸರು ಬರೆಯುವುದು ಒಟ್ಟು	**1 × 3 = 3** 1 ಅಂಕ 1 ಅಂಕ 1 ಅಂಕ 3 ಅಂಕಗಳು
30.	ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನ ಗಣ ಜ ಗಣ ಭ ಗಣ ಜ ಗಣ ಜ ಗಣ ಜ ಗಣ ರ ಗಣ ನೆನೆಯ ದಿರಣ್ಣ ಭಾರತ ದೊಳಿಂಪೆ ಱರಾರು ಮನೊಂದೆ ಚಿತ್ತದಿಂ ಛಂದಸ್ಸು : ಇದು ಅಕ್ಷರಗಣಾಧಾರಿತ 'ಚಂಪಕಮಾಲಾವೃತ್ತ'ದ ಲಕ್ಷ್ಯವಾಗಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
VII.	**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :**	**1 × 3 = 3**
	ಅಲಂಕಾರವನ್ನು ಹೆಸರಿಸುವುದು	1 ಅಂಕ
	ಲಕ್ಷಣ ಬರೆಯುವುದು	1 ಅಂಕ
	ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು	1 ಅಂಕ
	ಒಟ್ಟು	3 ಅಂಕಗಳು
31.	''ಸೀತೆಯ ಮುಖಕಮಲ ಅರಳಿತು''	
	ಉತ್ತರ :	
	ಅಲಂಕಾರದ ಹೆಸರು : ರೂಪಕಾಲಂಕಾರ	
	ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.	
	ಸಮನ್ವಯ : ಉಪಮೇಯ : ಸೀತೆಯ ಮುಖ	
	ಉಪಮಾನ : ಕಮಲ	
	ಇಲ್ಲಿ ಉಪಮೇಯವಾದ 'ಸೀತೆಯ ಮುಖ' ಹಾಗೂ ಉಪಮಾನವಾದ 'ಕಮಲ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರ'ದ ಲಕ್ಷ್ಯವಾಗಿದೆ.	
VIII.	**ಗಾದೆಯನ್ನು ವಿಸ್ತರಿಸಿ ಬರೆಯುವುದು :**	**1 × 3 = 3**
	ಗಾದೆಯ ಮಹತ್ತ್ವದ ವಿವರಣೆ	1 ಅಂಕ
	ಅರ್ಥ ವಿವರಣೆ	1 ಅಂಕ
	ಭಾಷಾಶೈಲಿಗೆ–ಪದಬಂಧಗಳಿಗೆ	1 ಅಂಕ
	ಒಟ್ಟು	3 ಅಂಕಗಳು
32.	ಮಾತೇ ಮುತ್ತು, ಮಾತೇ ಮೃತ್ಯು.	
	ಅಥವಾ	
	ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
IX.	**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**	**6 × 3 = 18**
	ಕರ್ತೃ, ಆಕರ ಮತ್ತು ಪಠ್ಯದ ಹೆಸರು	1 ಅಂಕ
	ಸಂದರ್ಭದ ವಿವರಣೆ	1 ಅಂಕ
	ಸ್ವಾರಸ್ಯ ಮತ್ತು ಶೈಲಿ	1 ಅಂಕ
	ಒಟ್ಟು	3 ಅಂಕಗಳು
33.	"ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು." ***ಉತ್ತರ :*** ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ***ಸಂದರ್ಭ :*** ನಾಲ್ವಡಿ ಕೃಷ್ಣರಾಜ ಒಡೆಯರು ಸರ್ ಎಂ. ವಿಶ್ವೇಶ್ವರಯ್ಯನವರನ್ನು ಮೈಸೂರು ಸಂಸ್ಥಾನದ ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು. ನಾಡಿನ ಪ್ರಗತಿ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ಎಂಬುದನ್ನರಿತಿದ್ದ ವಿಶ್ವೇಶ್ವರಯ್ಯನವರು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದರು. ಪ್ರತಿಯೊಬ್ಬರಿಗೂ ಶಿಕ್ಷಣ ದೊರೆಯುವಂತಾಗಬೇಕು. ಎಂದು ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಮಾಡಿದರು, ಇವರು ಶಿಕ್ಷಣಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಲೇಖಕರು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. ***ಸ್ವಾರಸ್ಯ :*** ಸ್ವಾತಂತ್ರ್ಯ ಪೂರ್ವಕಾಲದಲ್ಲೇ ಶಿಕ್ಷಣ ಮೂಲಭೂತ ಹಕ್ಕು ಎಂಬ ಪ್ರಜಾಪ್ರಭುತ್ವದ ಆಶಯ ಕಾರ್ಯಗತಗೊಳಿಸಲು ಶಿಕ್ಷಣದಲ್ಲಿ ಮಹತ್ತ್ವದ ಯೋಜನೆಗಳನ್ನು ಅನುಷ್ಠಾನಕ್ಕೆತಂದರು. ಒಬ್ಬ ಸಮರ್ಥ ಆಡಳಿತಗಾರರಾಗಿ ಶಿಕ್ಷಣವು ಪ್ರತಿಯೊಬ್ಬರಿಗೂ ದೊರೆಯುವಂತಾಗಬೇಕೆಂಬ ಉದ್ದೇಶದಿಂದ ವಿವಿಧ ಯೋಜನೆ ರೂಪಿಸಿ ಯಶಸ್ಸು ಪಡೆಯುವ ಅವರ ನಿಲುವು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
34.	''ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ.'' ***ಉತ್ತರ :*** ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ***ಸಂದರ್ಭ :*** ಲೇಖಕರು ಡಾ. ಅಶೋಕ ಪೈಯವರು ನಡೆಸಿದ ಸಂಶೋಧನಾ ಸತ್ಯದ ಬಗ್ಗೆ ತಿಳಿಸುತ್ತಾ, ಕೆಲವರು ಒಂದು ಕೊಠಡಿಯಲ್ಲಿ ದೂರದರ್ಶನ ವೀಕ್ಷಣೆ ಮಾಡುತ್ತಿರುತ್ತಾರೆ. ಇದರ ಅರಿವಿಲ್ಲದೆ ಮತ್ತೊಂದಷ್ಟು ಜನ ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತ ಕುಳಿತಿರುತ್ತಾರೆ. ದೂರದರ್ಶನದಲ್ಲಿ ಬರುವ ದುಃಖದ ಭಾವನೆ ಹಾಗೂ ಸಂತೋಷದ ಭಾವನೆ ಪಕ್ಕದ ಕೊಠಡಿಯಲ್ಲಿ ಕುಳಿತಿರುವವರಲ್ಲಿಯೂ ಮೂಡುತ್ತದೆ ಎಂದು ಲೇಖಕರು ವಿವರಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ. ***ಸ್ವಾರಸ್ಯ :*** ವಿಶ್ವದಲ್ಲಿರುವ ಯಾವುದೇ ಜೀವಿಗಳು ತಮ್ಮಷ್ಟಕ್ಕೆ ತಾವಿಲ್ಲ. ಒಬ್ಬ ವ್ಯಕ್ತಿ ಅಥವಾ ಒಂದು ಜೀವಿಗೆ ಆಗುವ ದುಃಖದುಮ್ಮಾನ, ಸಂತೋಷ ಪರಿಸರದಲ್ಲಿ ಉಸಿರಾಡುವ ಎಲ್ಲಾ ಜೀವಿಗಳಲ್ಲೂ ಕಂಪನವನ್ನು ಉಂಟುಮಾಡುತ್ತದೆಂಬ ಭಾವ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.	
35.	''ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ.'' ***ಉತ್ತರ :*** ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್‌ರವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ***ಸಂದರ್ಭ :*** ರಾಹಿಲನು ತನ್ನ ರಕ್ಷಣೆಗಾಗಿ ಒಂಟಿ ಮನೆಯ ಸಮೀಪ ತೆರಳಿ, ದಯವಿಟ್ಟು ಬಾಗಿಲು ತೆಗೆಯಿರಿ, ನಾನು ಗಾಯಗೊಂಡಿದ್ದೇನೆ'	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಎಂದು ಮನೆಯ ಬಾಗಿಲು ತಟ್ಟುತ್ತಾ ಹೇಳಿದ್ದನ್ನು ಕೇಳಿಸಿಕೊಂಡ ಮುದುಕಿಯು ಕೋಪದಿಂದ ಎಲ್ಲರ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ ಎಂದು ಗೊಣಗಿಕೊಂಡು ಬಾಗಿಲು ತೆಗೆದು ಯಾರಪ್ಪಾ ನೀನು ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ರಾಹಿಲನು ಈ ಮೇಲಿನ ಮಾತನ್ನು ಹೇಳಿದನು.	
	ಸ್ವಾರಸ್ಯ : ಜನಸಾಮಾನ್ಯರಲ್ಲಿ ಯುದ್ಧದ ಬಗೆಗಿರುವ ತಿರಸ್ಕಾರ, ಯುದ್ಧದಿಂದಾಗುವ ಕೆಡುಕುಗಳು, ಯುದ್ಧದಲ್ಲಿ ನೊಂದವರು ಧರ್ಮ ಭಿನ್ನತೆ, ದೇಶ ಭಿನ್ನತೆ, ವೈರಿ-ಮಿತ್ರ ಎಂಬುದನ್ನು ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ಮುಂದಾಗುವ ಮಾನವೀಯ ಮೌಲ್ಯಯುತ ನಡೆವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿಬಂದಿವೆ.	
36.	''ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ''	
	ಉತ್ತರ :	
	ಆಯ್ಕೆ : ಪ್ರಸ್ತುತ ಸಾಲನ್ನು ದ.ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ವರಕವಿ ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲವೆಂಬ ಹಕ್ಕಿಯ ಗಾತ್ರ ಬಹಳ ದೊಡ್ಡದು. ಹಕ್ಕಿಯು ನೀಲಾಗಸದ ಬಣ್ಣವನ್ನೇ ಹೊಂದಿದೆ. ವೇಗವಾಗಿ ಹಾರುವ ಹಕ್ಕಿಯ ರೆಕ್ಕೆಗಳು ವಿಸ್ತಾರವಾದ ಮುಗಿಲಿಗೆ ರೆಕ್ಕೆಗಳು ಮೂಡಿದಂತಿದೆ. ರೆಕ್ಕೆಯನ್ನು ಬಡಿಯುತ್ತಾ, ನಕ್ಷತ್ರಗಳ ಮಾಲೆಯನ್ನು ಧರಿಸಿಕೊಂಡು ಸೂರ್ಯಚಂದ್ರರನ್ನೇ ತನ್ನ ಕಣ್ಣುಗಳಾಗಿ ಹೊಂದಿರುವ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಕಾಲವೆಂಬ ಹಕ್ಕಿ ವೇಗವಾಗಿ ಹಾರುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : 'ಕಾಲಾಯ ತಸ್ಮೈ ನಮಃ' ಕಾಲದ ಗತಿಗೆ ಎಲ್ಲರೂ ತಲೆಬಾಗಲೇಬೇಕು. ಕಾಲದ ವ್ಯಾಪ್ತಿ ಭೂಮಿ-ಆಕಾಶಗಳಲ್ಲಿ ವ್ಯಾಪಿಸಿಕೊಂಡಿದೆ. ಕಾಲ ಎಲ್ಲವನ್ನು ತನ್ನ ತೆಕ್ಕೆಯಲ್ಲಿ ಮರೆಮಾಚುವಷ್ಟು ಶಕ್ತಿಶಾಲಿಯಾಗಿದೆ. ಕಾಲವನ್ನು ಹಕ್ಕಿಯ ಹಾರುವಿಕೆಯ ಸಹಜ ಕ್ರಿಯೆಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.	
37.	''ಹಸುರಾದುದು ಕವಿಯಾತ್ಮಂ''	
	ಉತ್ತರ :	
	ಆಯ್ಕೆ : ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.	
	ಸಂದರ್ಭ : ಕವಿಯ ಹುಟ್ಟೂರಾದ ಕವಿಶೈಲದಲ್ಲಿ ನವರಾತ್ರಿಯಲ್ಲಿ ಎಲ್ಲಿ ನೋಡಿದರಲ್ಲಿ ಹಸುರು. ಆಗಸ, ಮುಗಿಲು, ಗದ್ದೆಯ ಬಯಲು, ಬೆಟ್ಟ, ಕಣಿವೆ, ಸಂಜೆಯ ಬಿಸಿಲು, ಎಲರಿನ ತಂಪು, ಹೂವಿನ ಕಂಪು, ಹಕ್ಕಿಯ ಕೊರಲಿಂಪು ಹೀಗೆ ಎಲ್ಲೆಡೆಯೂ ಹಸುರನ್ನು ಕಾಣುತ್ತಲಿರುವ ಕವಿ ಪ್ರಕೃತಿಯ ಹಸುರಿನೊಂದಿಗೆ ಲೀನವಾಗುತ್ತಿರುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.	
	ಸ್ವಾರಸ್ಯ : ಪಂಚೇಂದ್ರಿಯಗಳಿಗೆ ಅನುಭವಕ್ಕೆ ಬರುವ ಪ್ರಕೃತಿಯ ಸೌಂದರ್ಯ ಕ್ರಮೇಣ ಆತ್ಮಾನುಭೂತಿಯ ಮಟ್ಟಕ್ಕೆ ಏರುವುದು ಕುವೆಂಪು ಅಂತಹ ರಸ ಋಷಿಗೆ, ರಸತಪಸ್ವಿಗೆ ಮಾತ್ರ ಸಾಧ್ಯ. ಪ್ರಕೃತಿಯೊಂದಿಗೆ ಲೀನವಾಗುವ ಕವಿಯ ಅದ್ವೈತ ಮನಸ್ಥಿತಿ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
38.	''ದ್ರುಪದಂ ಕಡುಸಿಗ್ಗು ಮಾಡಿದಂ'' *ಉತ್ತರ :* ***ಆಯ್ಕೆ :*** ಪ್ರಸ್ತುತ ಸಾಲನ್ನು ಕವಿ ಪಂಪ ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ***ಸಂದರ್ಭ :*** ದ್ರೋಣನು ದ್ರುಪದನ ಅರಮನೆಯ ಒಳಗೆ ಬಲವಂತದಿಂದ ಪ್ರವೇಶಿಸಿ ದ್ರುಪದನನ್ನು ಕುರಿತು, ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ತಿಳಿದಿಲ್ಲವೇ ಎಂದಾಗ, ನೀನು ಯಾರೆಂಬುದು ನನಗೆ ತಿಳಿದಿಲ್ಲ. ನನ್ನನ್ನು ಅದೆಲ್ಲಿ ಕಂಡಿದ್ದೆಯೊ ? ರಾಜನಿಗೂ ಬ್ರಾಹ್ಮಣನಿಗೂ ಸ್ನೇಹ ಇರಲು ಸಾಧ್ಯವೇ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಇರುತ್ತಾರೆಯೇ ಎಂದು ದ್ರುಪದನು ದ್ರೋಣನನ್ನು ಹೀಯಾಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. ***ಸ್ವಾರಸ್ಯ :*** ಐಶ್ವರ್ಯವು ಬಂದಾಗ ವ್ಯಕ್ತಿ ಅಹಂಕಾರದಿಂದ ಕುರುಡನಾಗಿ ಸಂಬಂಧಗಳನ್ನೆಲ್ಲಾ ಮರೆತು ಮೃಗನಂತೆ ವರ್ತಿಸುತ್ತಾನೆ. ಅಧಿಕಾರದ ಮದಾಂಧತೆ, ಅಹಂ ವ್ಯಕ್ತಿಯ ವ್ಯಕ್ತಿತ್ವವನ್ನು ಹೇಗೆ ಬದಲಿಸುವುದೆಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.	
X.	**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :**	**1 × 4 = 4**
39.	ಕಲುಷಿತವಾದೀ .... ಮುಟ್ಟೋಣ ***ಅಥವಾ***	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಮತಗಳೆಲ್ಲವೂ .... ಬಿತ್ತೋಣ ***ಉತ್ತರ :*** ಕಲುಷಿತವಾದೀ ನದೀಜಲಗಳಿಗೆ ಮುಂಗಾರಿನ ಮಳೆಯಾಗೋಣ ಬರಡಾಗಿರುವೀ ಕಾಡುಮೇಡುಗಳ ವಸಂತವಾಗುತ ಮುಟ್ಟೋಣ ***ಅಥವಾ*** ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದೊಳು ಬದುಕೋಣ ಭಯ-ಸಂಶಯದೊಳು ಕಂದಿದ ಕಣ್ಣೊಳು ನಾಳಿನ ಕನಸನು ಬಿತ್ತೋಣ	
XI.	**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :**	**1 × 4 = 4**
	ವಿಷಯಾಂಶಕ್ಕೆ ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ ಒಟ್ಟು	3 ಅಂಕಗಳು 1 ಅಂಕ 4 ಅಂಕಗಳು
40.	ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಜಿಪಂ ಕರೆಸಲಾಗಿ ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ***ಉತ್ತರ :***	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆ ತನ್ನ ತಂದೆ ಶ್ರೀರಾಮನದು ಎಂದು ತಿಳಿಯದೆ ಲವನು ಬಾಲಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ.

ಶ್ರೀರಾಮನ ಹೆಸರನ್ನು ಕೇಳಿ ಪರಾಕ್ರಮಿಗಳಾದ ರಾಜರುಗಳು ಅಶ್ವಮೇಧಯಾಗದ ಕುದುರೆಗೆ ನಮಿಸಿ ಶರಣಾಗಿ, ಯಜ್ಞಾಶ್ವವು ಮುಂದೆ ಚಲಿಸಲು ಅನುವು ಮಾಡಿಕೊಟ್ಟರು. ಹೀಗೆ ಯಾಗದ ಕುದುರೆ ದೇಶದೇಶಗಳನ್ನು ಸಂಚರಿಸುತ್ತಾ ವಾಲ್ಮೀಕಿ ಮುನಿಯ ಉಪಯೋಗದ ಉದ್ಯಾನವನದ ಕಡೆಗೆ ಬರುತ್ತದೆ. ಅಲ್ಲಿದ್ದ ಹಸಿರು ಹುಲ್ಲಿಗೆ ಆಕರ್ಷಿಸಲ್ಪಟ್ಟು, ತಿನ್ನಲು ಉಪವನವನ್ನು ಹೊಕ್ಕಿತು. ಇದನ್ನು ಬಾಲಕ ಲವನು ನೋಡಿದನು. ತನಗೆ ತೋಟದ ರಕ್ಷಣೆಯನ್ನು ಮಾಡಬೇಕೆಂದು ಗುರು ವಾಲ್ಮೀಕಿ ಹೇಳಿ ವರುಣ ಲೋಕಕ್ಕೆ ಹೋಗಿದ್ದಾರೆ. ಈ ಕುದುರೆಯು ಎಲ್ಲಿಂದ ಬಂತು ? ನಮ್ಮ ತೋಟವನ್ನೆಲ್ಲ ತುಳಿದು ಹಾಳು ಮಾಡುತ್ತಿದೆ. ಈ ವಿಚಾರ ತಿಳಿದರೆ ವಾಲ್ಮೀಕಿ ಮುನಿಗಳು ಕೋಪಗೊಳ್ಳುವರು ಎಂದು ಬಿಲ್ಲು ಹಿಡಿದು ಕುದುರೆಯ ಬಳಿ ಬಂದು ನೋಡಿದಾಗ ಅದರ ನೆತ್ತಿಯಲ್ಲಿ ಬರೆದಿದ್ದ ಪಟ್ಟಿಯಲ್ಲಿದ್ದ ಲೇಖನವನ್ನು ಓದಿಕೊಳ್ಳುತ್ತಾನೆ.

ಹುಟ್ಟಿದ್ದು ಋಷ್ಯಾಶ್ರಮದಲ್ಲಿಯಾದರೂ ಲವನಿಗೆ ಕ್ಷಾತ್ರಗುಣ ರಕ್ತದಲ್ಲಿಯೇ ಬಂದಿದೆ. ತನಗೆ ವಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡುವ ಪ್ರಾಮಾಣಿಕ ನಡೆ, ಬಾಲಸಹಜ ಕುತೂಹಲ ಹಾಗೂ ಧೈರ್ಯ ಮೊದಲಾದ ಗುಣಗಳು ಲವನಲ್ಲಿ ಮುಪ್ಪುರಿಗೊಂಡಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. ಕಷ್ಟ ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿಯ ಮೌಲ್ಯ ಈ ಪದ್ಯಭಾಗದಲ್ಲಿ ಅಡಕವಾಗಿದೆ.

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XII.	**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**	**2 × 4 = 8**
	ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ	3 ಅಂಕಗಳು
	ಭಾಷಾಶೈಲಿಗೆ, ಪದಬಂಧಗಳಿಗೆ	1 ಅಂಕ
	ಒಟ್ಟು	4 ಅಂಕಗಳು
41.	ಶಬರಿ ಹಾಗೂ ಶ್ರೀರಾಮನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.	
	ಅಥವಾ	
	ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿರುವ ಬಗೆಯನ್ನು ವಿವರಿಸಿ.	
	ಉತ್ತರ :	
	ಶ್ರೀರಾಮದರ್ಶನವೊಂದೇ ತನ್ನ ಬದುಕಿನ ಗುರಿಯೆಂದು ಭಾವಿಸಿದ್ದಳು ಭಕ್ತೆ ಶಬರಿ. ರಾಮನಾಮವೇ ಮಂತ್ರ ಅದೇ ಆಕೆಯ ಉಸಿರಿನ ಶಕ್ತಿ. ಪ್ರತಿದಿನ ರಾಮನ ಬರುವಿಕೆಗಾಗಿಯೇ ಪರಿತಪಿಸುತ್ತಿದ್ದಳು. ರಾಮನ ದರ್ಶನದಿಂದ ಹಿಗ್ಗಿ ಸಂತಸಪಡುತ್ತಾಳೆ. ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನು ಕೂಡ ನಿನ್ನ ಆದರದಿಂದ ನಾವು ಸುಖಿ. ನಿನಗೆ ನಾವು ಋಣಿ ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ ? ನಾನೊಬ್ಬಳು ಬಡವಿ. ನನ್ನ ಮೇಲೆ ಮರುಕ ತೋರಿದಿರಾ ? ಎನ್ನುತ್ತಾಳೆ. ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ. ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ. ನಿನ್ನ ಮನೆಯೇ ನಮ್ಮ ಮನೆ ನೀನೇ ತಾಯಿಯಂತೆ	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಎಂದು ರಾಮ ಹೇಳಿದಾಗ, ನಿನ್ನ ರೂಪದಂತೆ ನಿನ್ನ ಮಾತು ಕೂಡ ಸುಂದರ ಹಾಗೂ ಉದಾರ. ನಾನು ಧನ್ಯಳಾದೆ. ಸಿದ್ಧರಾದ ಮತಂಗರ ವರ ನನಗೆ ಫಲಿಸಿತು. ನಿಮ್ಮನ್ನು ಕಂಡ ಪುಣ್ಯ, ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಲಭಿಸಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ. ಶ್ರೀರಾಮನು ನಿನ್ನ ಗುರುಗಳ ಮಹಿಮೆಯನ್ನು ಬಲ್ಲೆನು. ನಿನ್ನಂತಹ ಶಿಷ್ಯೆಯ ಪ್ರೀತಿಯನ್ನು ಪಡೆದ ಶಾಂತಮೂರ್ತಿಗಳಾದ ಅವರೇ ಧನ್ಯರು. ಅಪಾರ ದುಃಖವನ್ನು ಮರೆಸಿ ಶಾಂತಿ ನೀಡುವ ಈ ವನದಲ್ಲಿ ಪ್ರೇಮದ ಶುದ್ಧಸ್ವರೂಪವೇ ನೀನು ಎಂದು ಹೇಳುತ್ತಾನೆ. ನನ್ನನ್ನು ಏಕೆ ಹೊಗಳುವೆ ರಾಮ ಎಲ್ಲ ಗುರುಗಳ ಕರುಣೆ. ನೀವು ನನ್ನವರೆಗೂ ಬಂದು ದರ್ಶನ ಭಾಗ್ಯ ನೀಡಿದ ಕರುಣೆ, ಸಿದ್ಧರು ತಿಳಿಸಿದ ಮಾತು ಇಂದು ನನಗೆ ಸತ್ಯವಾಯಿತು. ಈ ಭವ ಬಂಧನದಿಂದ ಮುಕ್ತಿ ಪಡೆಯಲು ಸಮಯ ಬಂದಿದೆ. ನಿನಗಾಗಿ ನಿನ್ನ ದರ್ಶನಕ್ಕಾಗಿ ಹಂಬಲಿಸುತ್ತಿದ್ದೆನು. ಅದು ಪೂರ್ಣವಾಯಿತು. ಬಂಧಮುಕ್ತಳಾಗಲು ನನಗೆ ಅನುಮತಿ ನೀಡು ಎನ್ನುತ್ತಾಳೆ. ಆಗ ರಾಮ ತಾಯಿಯಂತೆ ನಮ್ಮನ್ನು ಪ್ರೀತಿಸಿ, ಆದರಿಸಿ ಈಗ ಸಾವಿನ ಮಾತು ಏಕೆ ? ಇಷ್ಟು ಪ್ರೀತಿ ನೀಡಿದ ನಿನಗೆ ಮರಣವು ನಮ್ಮ ಕಾಣಿಕೆ ಆಯಿತಲ್ಲ ಎಂದು ದುಃಖಪಡುತ್ತಾನೆ. ಮರಣವಲ್ಲ, ಮುಕ್ತಿ ಪ್ರಭು. ಇದೇ ನನ್ನ ಪ್ರತಿಜ್ಞೆ ಇದರಿಂದ ನನ್ನೀ ಜನ್ಮ ಸಾರ್ಥಕವಾಗುತ್ತದೆ ಎನ್ನುತ್ತಾಳೆ. ಶಬರಿಯ ಭಕ್ತಿಗೆ ಮನಸೋತು ಶ್ರೀರಾಮ ಆಶೀರ್ವದಿಸಿದಾಗ ಶಬರಿಯು ಬಲವಂದು ಬಂದು ಯಜ್ಞಕುಂಡವನ್ನು ಪ್ರವೇಶಿಸುತ್ತಾಳೆ. **ಅಥವಾ**	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ರಾಮನ ದರ್ಶನಕ್ಕಾಗಿ ಹಗಲಿರುಳು ಹಂಬಲಿಸುತ್ತಿದ್ದ ಶಬರಿಗೆ ರಾಮನ ದರ್ಶನವಾದಾಗ ಆಕೆಯ ಸಂತಸ, ಸಡಗರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ರಾಮ ಬಂದು ನಿಂತಿರುವುದನ್ನು ಕಂಡ ಶಬರಿ ಅವನ ಬಳಿ ಹೋಗಿ ಅವನನ್ನು ಮುಟ್ಟುತ್ತಾಳೆ. ನೀ ರಾಮನೇ ಮಹಾಪುರುಷ ಎಂದು ಪ್ರಶ್ನಿಸುತ್ತಾಳೆ. ಹತ್ತಿರ ಹೋಗಿ ಅವನ ಪಾದಗಳಿಗೆ ನಮಸ್ಕರಿಸುತ್ತಾಳೆ. ಅವನ ಕೈಹಿಡಿದು ಕರೆದುಕೊಂಡು ಬರುತ್ತಾಳೆ. ಅಯ್ಯೋ ಇಂದು ಏನೂ ಸಿದ್ಧತೆಯೇ ಆಗಿಲ್ಲ. ನಿನ್ನೆಯಷ್ಟು ಚೆಂದವಿಲ್ಲ ಎಂದು ಬೇಸರಿಸುತ್ತಾಳೆ. ರಾಮಲಕ್ಷ್ಮಣರನ್ನು ಆಸನದ ಮೇಲೆ ಕೂರಿಸಿ, ಸುವಾಸನೆಯುಳ್ಳ ಹೂಮಾಲೆಯನ್ನು ಅವರ ಕೊರಳಿಗೆ ಹಾಕಿ ಸಂಭ್ರಮಿಸುತ್ತಾಳೆ. ರುಚಿಯಾದ ಹಣ್ಣುಗಳನ್ನು ತಿನ್ನಲು ನೀಡುತ್ತಾಳೆ. ತನ್ನ ಸಂತಸವನ್ನು ಪ್ರಕಟಪಡಿಸಲು, ಇಂದು ನಾನೇ ಪರಮಸುಖಿ. ಆಸೆಯೆಲ್ಲ ತೀರಿ ಹಾಯಾಗಿರುವೆನು. ನೌಕೆ ಕಡಲತೀರವನ್ನು ತಲುಪಿದ ಹಾಗೆ, ಹಂಬಲವು ಈಡೇರಿ ಹಾಯಾಗಿದ್ದೇನೆ. ನಿಮ್ಮನ್ನು ನೋಡಿ ನನ್ನ ಮನವು ಸಂತಸದಿಂದ ತುಂಬಿದೆ. ನಿಮ್ಮನ್ನು ಸತ್ಕರಿಸಿದ ನಾನು ಸುಖಿ. ನನಗೆ ಇಂದು, ನಾಳೆ ಏನೂ ಇಲ್ಲ. ನಿಮ್ಮ ದರ್ಶನದಿಂದ ಉಂಟಾಗಿರುವ ನಲಿವು ಚಿರವಾದುದೆಂದು ಸಂಭ್ರಮದಿಂದ ಹಾಡಿ ನರ್ತಿಸುತ್ತಾಳೆ. ಹೀಗೆ ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ವ್ಯಕ್ತಗೊಂಡಿದೆ.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
42.	ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ. **ಅಥವಾ** ಕೃಷ್ಣನಿಂದ ಜನ್ಮರಹಸ್ಯವನ್ನು ಕೇಳಿ ಪಾಂಡವರಿಗೆ ಅಪಾಯವಾಗದಂತೆ ನಿರ್ಧಾರ ಕೈಗೊಳ್ಳುವ ಕರ್ಣನ ಮನಸ್ಥಿತಿಯನ್ನು ಕುರಿತು ಬರೆಯಿರಿ. ***ಉತ್ತರ :*** ಧರ್ಮಪಕ್ಷಪಾತಿಯೂ, ಕಪಟ ನಾಟಕ ಸೂತ್ರಧಾರಿಯೂ ಆದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಹೋಗಿ ಆತನು ಯುದ್ಧದಿಂದ ವಿಮುಖನಾಗುವಂತೆ ಮಾಡುತ್ತಾನೆ. ಕೃಷ್ಣ ಸಂಧಾನ ವಿಫಲವಾದಾಗ ಕರ್ಣನನ್ನು ರಥದಲ್ಲಿ ಕೂರಿಸಿಕೊಂಡು ಜನ್ಮರಹಸ್ಯವನ್ನು ತಿಳಿಸಿ ಕರ್ಣನಿಗೆ ಹಲವು ಆಸೆ ಆಮಿಷಗಳನ್ನು ಒಡ್ಡುತ್ತಾನೆ. ನಿಮಗೂ ಯಾದವರು ಕೌರವರಿಗೂ ಭೇದವಿಲ್ಲ. ನೀನು ನಿಜವಾಗಿ ಈ ಭೂಮಿಗೆ ಒಡೆಯನಾಗಬೇಕು. ಆದರೆ ನಿನಗೆ ಇದರ ಅರಿವಿಲ್ಲ ಎಂದು ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯವನಾಗಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ-ಸಹದೇವರಿಬ್ಬರು ಜನಿಸಿದರು. ನಿನ್ನನ್ನು ಹಸ್ತಿನಾಪುರ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶದವರು ಮರುಮಾತನಾಡದೆ ಸೇವೆಯನ್ನು ಮಾಡುವರು. ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಸರಿಯೇ ? ನಿನ್ನ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು ಎದುರಿಗೆ ಮಾದ್ರ, ಮಾಗಧ, ಯಾದವಾದಿಗಳು ಇರುತ್ತಾರೆ. ಇವರ ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಶೋಭಿಸುವ ವಿಶೇಷ ಸೊಬಗನ್ನು ತೊರೆದು ದುರ್ಯೋಧನನು ಕರೆದಾಗ 'ಒಡೆಯ ಅಪ್ಪಣೆ' ಎನ್ನಲು ನಿನಗೆ ಕಷ್ಟವಾಗುವುದಿಲ್ಲವೇ ? ಎನ್ನುತ್ತಾನೆ. ಧರ್ಮರಕ್ಷಣೆಗೆ ಮುಂದಾದ ಕೃಷ್ಣನು ಧರ್ಮ ಪಾಂಡವರ ಪರ ಇದ್ದುದರಿಂದ ಪಾಂಡವರಿಗೆ ಯಾವುದೇ ಅಪಾಯ ವಾಗಬಾರದೆಂದು ನಿರ್ಧರಿಸಿ ಕರ್ಣನಿಗೆ ಆತನ ಜನ್ಮರಹಸ್ಯ ತಿಳಿಸುತ್ತಾನೆ. ಹೀಗೆ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಹಲವು ಆಮಿಷಗಳನ್ನು ಒಡ್ಡುತ್ತಾನೆ.

ಅಥವಾ

ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ದುರ್ಯೋಧನ ನಿರಾಕರಿಸುತ್ತಾನೆ. ಸಂಧಾನದ ಮೂಲಕ ರಾಜ್ಯವನ್ನು ಮರಳಿ ಪಡೆಯುವ ಯತ್ನವನ್ನು ಧರ್ಮರಾಯನು ಕೃಷ್ಣನ ಮೂಲಕ ಪ್ರಯತ್ನಿಸುತ್ತಾನೆ. ದುರ್ಯೋಧನನ ಹಠದಿಂದ ಸಂಧಾನ ತಿರಸ್ಕೃತವಾದಾಗ ಯುದ್ಧ ಅನಿವಾರ್ಯವಾಗುತ್ತದೆ. ಧರ್ಮಪ್ರತಿಷ್ಠಾಪನೆಗಾಗಿ ಕೃಷ್ಣನು ಶತ್ರುಗಳ ಬಲವನ್ನು ಕುಗ್ಗಿಸುವ ಭೇದತಂತ್ರವನ್ನು ಪ್ರಯೋಗಿಸಲಾರಂಭಿಸುತ್ತಾನೆ. ಆ ಮೂಲಕ ಕರ್ಣನನ್ನು ತನ್ನ ರಥದಲ್ಲಿ ಕೂರಿಸಿಕೊಂಡು, ಅವನ ಜನ್ಮವೃತ್ತಾಂತವನ್ನು ಹೇಳುತ್ತಾನೆ. ಅಲ್ಲದೆ ಪಾಂಡವರಲ್ಲಿ ಹಿರಿಯನಾದುದರಿಂದ ಸಾಮ್ರಾಜ್ಯಕ್ಕೆ ನೀನೆ ಅಧಿಪತಿಯಾಗುವೆ ಎಂಬ ಆಮಿಷವನ್ನು ಒಡ್ಡುತ್ತಾನೆ. ಕೃಷ್ಣನ ಮಾತುಗಳನ್ನು ಸಮಾಧಾನದಿಂದ ಕೇಳಿದ ಕರ್ಣನು ತನ್ನ ಜನ್ಮವೃತ್ತಾಂತವನ್ನು ತಿಳಿದು ಕುರುಪತಿಯಾದ ದುರ್ಯೋಧನನಿಗೆ ಕೇಡಾಯಿತು ಎಂದು ತನ್ನ ಮನದೊಳಗೆ ನೊಂದುಕೊಳ್ಳುತ್ತಾನೆ. ಕೃಷ್ಣನ ಆಮಿಷದಿಂದ ಕರ್ಣನ ಕೊರಳಿನ ರಕ್ತನಾಳಗಳು ಹಿಗ್ಗಿದವು. ಕಂಬನಿಯು ರಭಸದಿಂದ ಮುನ್ನುಗ್ಗಿ ಬಂದು ಬಹಳ ನೊಂದನು.

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಹರಿಯ ಹಗೆತನ ಹೊಗೆ ಕಾಣಿಸಿಕೊಳ್ಳದೆ, ಸುಡದೆ ಬಿಡುವುದಿಲ್ಲ. ನನ್ನ ಜನ್ಮರಹಸ್ಯ ತಿಳಿಸಿ ಕೊಂದನು. ಹೆಚ್ಚಿಗೆ ಹೇಳಲು ಏನೂ ಇಲ್ಲ ಎಂದು ಮೌನಿಯಾದನು. ಮಾತಾಡದೆ ಮೌನಿಯಾಗಿದ್ದ ಕರ್ಣನನ್ನು ಕುರಿತು ನಿನ್ನ ಮನಸ್ಸಿನಲ್ಲಾದ ತಲ್ಲಣಗಳೇನು ? ಚಿಂತಿಸಬೇಡ. ನಿನ್ನ ಅಪದೆಸೆಯನ್ನು ನಾನು ಬಯಸುವುದಿಲ್ಲ. ಆದರೆ ಮರುಳುತನ ಮಾಡಬೇಡ ಎಂದು ಕೃಷ್ಣ ಹೇಳಿದಾಗ ಸಿಟ್ಟಿಗೆದ್ದ ಕರ್ಣ ಮರುಳು ಮಾಧವ ಈ ಭೂಮಿಯ ರಾಜ್ಯದ ಸಿರಿಸಂಪತ್ತಿಗೆ ನಾನು ಸೋಲುವುದಿಲ್ಲ. ಕೌರವರು ಮತ್ತು ಪಾಂಡವರು ಸೇವಕರಾಗುವುದು ನನಗೆ ಇಷ್ಟವಿಲ್ಲ. ನನ್ನನ್ನು ಸಾಕಿ ಸಲುಹಿದ ದೊರೆ ದುರ್ಯೋಧನನ ಶತ್ರುಗಳ ಶಿರವನ್ನು ಕಡಿದು ಅರ್ಪಿಸಬೇಕೆಂಬ ಉತ್ಸಾಹದಲ್ಲಿದ್ದೆ, ಆದರೆ ನೀನು ಜನ್ಮರಹಸ್ಯವನ್ನು ಹೇಳಿ ದುರ್ಯೋಧನನನ್ನು ಕೊಂದು ಬಿಟ್ಟೆ ಎಂದು ತನ್ನ ಮನಸ್ಸಿನಲ್ಲಾದ ನೋವನ್ನು ಕೃಷ್ಣನ ಬಳಿ ಹೇಳಿಕೊಳ್ಳುತ್ತಾನೆ. ಪಾಂಡವರ ರಕ್ಷಣೆಗೆ ನಿಂತ ಕೃಷ್ಣ ಒಂದು ಕಡೆ ಸ್ವಾಮಿ ನಿಷ್ಠೆಗೆ ಬದ್ಧನಾದ ಕರ್ಣ ಇನ್ನೊಂದು ಕಡೆ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದ ಸ್ಥಿತಿಯಲ್ಲಿ ನೋವು ಸಂಕಟದಿಂದ ಬಳಲುತ್ತಾನೆ. ಕರುಣೆ, ಉದಾತ್ತತೆ, ದಾನ, ಶೌರ್ಯಕ್ಕೆ ಹೆಸರಾಗಿದ್ದ ಕರ್ಣನ ವ್ಯಕ್ತಿತ್ವದ ಹಿರಿಮೆ ವ್ಯಕ್ತವಾಗಿದೆ.	
XIII.	**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**	**1 × 4 = 4** **(2 + 2)**
43.	ಭಾರತೀಯ ಸಂಗೀತ ಸಾಮ್ರಾಜ್ಯದಲ್ಲಿ ಸಾಮ್ರಾಜ್ಞಿಯಾಗಿ ಮಹಾನ್ ಪ್ರಖ್ಯಾತಿಗಳಿಸಿದವರು ಎಂ.ಎಸ್. ಸುಬ್ಬುಲಕ್ಷ್ಮಿ. ರಾಜ್ಯಸಭಾ ಸದಸ್ಯರಾಗಿ ಎಂದು ಭಾರತ ಘನ ಸರ್ಕಾರದಿಂದ ಕೋರಿಕೆ ಬಂದಾಗ, ''ನನಗೆ ಸಂಗೀತ ಕ್ಷೇತ್ರದಲ್ಲಿ ಮಾತ್ರ ತಿಳಿವಳಿಕೆ, ಜ್ಞಾನ, ವಿದ್ವತ್ತು ಇದೆಯೆಂದು ಭಾವಿಸಿದ್ದೇನೆ. ನನಗಿಂತ ಓದಿದವರು, ಅನುಭವವುಳ್ಳವರು	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಆ ಸ್ಥಳದಲ್ಲಿದ್ದರೆ ಅವರಿಂದ ನಮ್ಮ ದೇಶದ ಜನರಿಗೆ ಉತ್ತಮ ಸೇವೆ ದೊರಕಬಹುದು. ಜನರ ಮನಸ್ಸಿನಲ್ಲಿ ನನಗೆ ಸ್ಥಾನ ಸಿಕ್ಕಿದೆ. ಅವರ ಪ್ರೀತಿ ದೊರಕಿದೆ. ಈ ಪ್ರೀತಿ ಮತ್ತು ಗೌರವಗಳಿಗಿಂತ ರಾಜ್ಯಸಭೆಯ ಸ್ಥಾನ ಹೆಚ್ಚಿನದಲ್ಲ'' ಎಂದು ಭಾರತ ಸರ್ಕಾರಕ್ಕೆ ಪತ್ರ ಬರೆದು ಸುಲಭವಾಗಿ ತಿರಸ್ಕರಿಸಿದ ಅಪರೂಪದ ವ್ಯಕ್ತಿ ಭಾರತರತ್ನ ಪ್ರಶಸ್ತಿ ಪುರಸ್ಕೃತ ಮಹಿಳೆ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಸದಾಶಿವಂ.

ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಕ್ರಿ.ಶ. ೧೯೧೬ ನೇ ಸೆಪ್ಟೆಂಬರ್ ೧೬ ರಂದು ತಮಿಳುನಾಡಿನ ಮಧುರೈ ನಗರದಲ್ಲಿ ಜನಿಸಿದರು. ತಂದೆ ಸಂಗೀತ ಪ್ರೇಮಿಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್. ತಾಯಿ ಪ್ರಖ್ಯಾತ ವೀಣಾವಾದಕಿ ಷಣ್ಮುಖವಡಿವು. ಸುಬ್ಬುಲಕ್ಷ್ಮಿಯವರು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಶಿಕ್ಷಕಿಯೊಬ್ಬರು ಆಕೆಯನ್ನು ಹೊಡೆದರು. ಸೂಕ್ಷ್ಮ ಪ್ರಕೃತಿಯ ಹುಡುಗಿ ಪ್ರಜ್ಞೆ ತಪ್ಪಿ ಬಿದ್ದಳು. ಬೇಗನೆ ಪ್ರಜ್ಞೆ ಬಂತು. ಆದರೆ ಕೆಮ್ಮು ಬರಲು ಪ್ರಾರಂಭವಾಯಿತು. ನಂತರ ಪಡೆದ ಚಿಕಿತ್ಸೆಯಿಂದ ಗುಣವಾದಳು. ಇದನ್ನು ಗಂಭೀರವಾಗಿ ಭಾವಿಸಿದ ತಾಯಿ ಷಣ್ಮುಖವಡಿವುರವರು ತಮ್ಮ ಮಗಳಾದ ಸುಬ್ಬುಲಕ್ಷ್ಮಿರವರ ಶಾಲಾ ಶಿಕ್ಷಣವನ್ನು ಅಲ್ಲಿಗೇ ಮೊಟಕುಗೊಳಿಸಿದರು.

ಸುಬ್ಬುಲಕ್ಷ್ಮಿಯವರಿಗೆ ಸಂಗೀತದಲ್ಲಿ ತಮ್ಮ ತಾಯಿಯೇ ಪ್ರಥಮ ಗುರು. ತಾಯಿಯು ರೂಢಿಯಲ್ಲಿರುವ ಸಂಗೀತದ ಅಭ್ಯಾಸಗಳನ್ನು ವಿವರಿಸುತ್ತಿದ್ದರು. ಸುಬ್ಬುಲಕ್ಷ್ಮಿ ಮತ್ತು ಆಕೆಯ ತಂಗಿಯಾದ ವಡಿವಾಂಬಾಳ್ ಮುಂದಿನದನ್ನು ಕೇಳಿ ತಾವೇ ಅಭ್ಯಾಸ ಮಾಡುತ್ತಿದ್ದರು. ಹಾಡುಗಾರಿಕೆಗೆ ಹೇಳಿ ಮಾಡಿಸಿದಂತಿದ್ದ ಸುಮಧುರ ಕಂಠವಿರುವ ಸುಬ್ಬುಲಕ್ಷ್ಮಿ ಯಾವುದನ್ನೇ ಹಾಡಿದರೂ ಎಂಥವರೂ

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ತಲೆದೂಗುವಂತಿರುತ್ತಿತ್ತು. ಮಗಳಲ್ಲಿ ಕಂಡುಬರುತ್ತಿದ್ದ ಸಂಗೀತದ ಬಗೆಗಿನ ಆಸಕ್ತಿ ಹಾಗೂ ಶ್ರದ್ಧೆಯನ್ನು ಕಂಡು ಬಹಳವಾಗಿ ಸಂತೋಷ ಪಡುತ್ತಿದ್ದ ತಾಯಿ, ಆಕೆಗೆ ಸಂಗೀತದಲ್ಲಿ ವಿಶೇಷ ಶಿಕ್ಷಣ ನೀಡಲು ಮುಂದಾದರು. ***ಪ್ರಶ್ನೆಗಳು:*** ಅ) ಸುಬ್ಬುಲಕ್ಷ್ಮಿಯವರು ಶಾಲೆಯನ್ನು ಬಿಡಲು ಕಾರಣವೇನು ? ಆ) ರಾಜ್ಯಸಭಾ ಸದಸ್ಯರಾಗಿ ಎಂಬ ಕೋರಿಕೆ ಬಂದಾಗ ಸುಬ್ಬುಲಕ್ಷ್ಮಿಯವರ ಪ್ರತಿಕ್ರಿಯೆಯನ್ನು ತಿಳಿಸಿ. ***ಉತ್ತರ :*** ಅ) ಸುಬ್ಬುಲಕ್ಷ್ಮಿಯವರು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಶಿಕ್ಷಕಿಯೊಬ್ಬರು ಆಕೆಯನ್ನು ಹೊಡೆದರು. ಸೂಕ್ಷ್ಮ ಪ್ರಕೃತಿಯ ಹುಡುಗಿ ಪ್ರಜ್ಞೆ ತಪ್ಪಿ ಬಿದ್ದಳು. ಬೇಗನೆ ಪ್ರಜ್ಞೆ ಬಂತು. ಆದರೆ ಕೆಮ್ಮು ಬರಲು ಪ್ರಾರಂಭವಾಯಿತು. ನಂತರ ಪಡೆದ ಚಿಕಿತ್ಸೆಯಿಂದ ಗುಣವಾದಳು. ಇದನ್ನು ಗಂಭೀರವಾಗಿ ಭಾವಿಸಿದ ತಾಯಿ ಸುಬ್ಬುಲಕ್ಷ್ಮಿಯವರನ್ನು ಶಾಲೆಯಿಂದ ಬಿಡಿಸಿದರು. ಆ) ರಾಜ್ಯಸಭಾ ಸದಸ್ಯರಾಗಬೇಕೆಂಬ ಕೋರಿಕೆ ಬಂದಾಗ ಸುಬ್ಬುಲಕ್ಷ್ಮಿಯವರು ನನಗೆ ಸಂಗೀತ ಕ್ಷೇತ್ರದಲ್ಲಿ ಮಾತ್ರ ತಿಳಿವಳಿಕೆ, ಜ್ಞಾನ, ವಿದ್ವತ್ತು ಇದೆಯೆಂದು ಭಾವಿಸಿದ್ದೇನೆ. ನನಗಿಂತ ಓದಿದವರು, ಅನುಭವವುಳ್ಳವರು ಆ ಸ್ಥಳದಲ್ಲಿದ್ದರೆ ಅವರಿಂದ ನಮ್ಮ ದೇಶದ ಜನರಿಗೆ ಉತ್ತಮ ಸೇವೆ ದೊರಕಬಹುದು. ಜನರ ಮನಸ್ಸಿನಲ್ಲಿ ನನಗೆ ಸ್ಥಾನ ಸಿಕ್ಕಿದೆ. ಅವರ ಪ್ರೀತಿ ದೊರಕಿದೆ. ಈ ಪ್ರೀತಿ ಮತ್ತು ಗೌರವಗಳಿಗಿಂತ ರಾಜ್ಯಸಭೆಯ ಸ್ಥಾನ ಹೆಚ್ಚಿನದಲ್ಲ, ಎಂದು ಭಾರತ ಸರ್ಕಾರಕ್ಕೆ ಪತ್ರ ಬರೆಯುವುದರ ಮೂಲಕ ಪ್ರತಿಕ್ರಿಯಿಸಿದರು.	

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XIV.	**ಪತ್ರ ಲೇಖನ ಬರೆಯುವುದು :**	**1 × 5 = 5**
44.	ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ' ಎಂದು ಭಾವಿಸಿಕೊಂಡು, ಜಿಲ್ಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರವನ್ನು ಸ್ಥಾಪಿಸುವಂತೆ ಕೋರಿ, ಮಾನ್ಯ ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆಯಿರಿ.	
	ಅಥವಾ	
	ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ದಿಗಂತ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಗ್ರಂಥಸಪ್ತಾಹ ಕಾರ್ಯಕ್ರಮವನ್ನು ಕುರಿತು, ಬಳ್ಳಾರಿಯಲ್ಲಿ ವಾಸವಾಗಿರುವ 'ಶ್ರೀನಿವಾಸ್' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.	
	ವ್ಯಾವಹಾರಿಕ / ಮನವಿ ಪತ್ರ :	
	ಇಂದ, ಗೆ, ಸಂಬೋಧನೆ, ವಿಷಯ	1 ಅಂಕ
	ಪತ್ರದ ಒಡಲು, ವಿಷಯ ನಿರೂಪಣೆ	2 ಅಂಕಗಳು
	ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ	1 ಅಂಕ
	ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ	1 ಅಂಕ
	ಒಟ್ಟು	5 ಅಂಕಗಳು
	ಅಥವಾ	
	ಖಾಸಗಿ / ತಂದೆಗೆ ಪತ್ರ :	
	ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ	1 ಅಂಕ
	ಪತ್ರದ ಒಡಲು, ವಿಷಯ ನಿರೂಪಣೆ	2 ಅಂಕಗಳು
	ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ	1 ಅಂಕ
	ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ	1 ಅಂಕ
	ಒಟ್ಟು	5 ಅಂಕಗಳು

	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
XV.	**ಪ್ರಬಂಧ ಬರೆವಣಿಗೆ :**	**1 × 5 = 5**
45.	ಪ್ರಾಚ್ಯಸ್ಮಾರಕಗಳ ಸಂರಕ್ಷಣೆ.	
	ಅಥವಾ	
	ಹೆಣ್ಣುಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.	
	ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ	1 ಅಂಕ
	ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ	2 ಅಂಕಗಳು
	ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ	1 ಅಂಕ
	ಭಾಷಾಶೈಲಿಗೆ, ಪದಬಂಧ	1 ಅಂಕ
	ಒಟ್ಟು	5 ಅಂಕಗಳು